# ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:25-08-2015ರ ನಡವಳಿಗಳು

## ವಿಷಯದ ಸಂಖ್ಯೆ : 169 / 2015-16

ವಿಷಯ: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಕರ್ನಾಟಕ ಸರ್ಕಾರದ ಮುದ್ರಾಂಕ ಇಲಾಖೆಯು ದಿನಾಂಕ:27-10-2014 ರಂದು ಪ್ರಚುರಪಡಿಸಲಾಗಿರುವ ಸ್ಥಿರಾಸ್ತಿಗಳ ಮಾರ್ಗಸೂಚಿ ದರವನ್ನು ಅನುಸರಿಸಿ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ರಸ್ತೆಗಳ ವಲಯ ವರ್ಗೀಕರಣವನ್ನು ಜಾರಿಗೊಳಿಸುವ ಬಗ್ಗೆ.

**ಪ್ರಸ್ತಾವನೆ:**

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಕರ್ನಾಟಕ ಪೌರನಿಗಮಗಳ ಕಾಯ್ದೆ ಕಲಂ 108 (ಎ) (16) ರ ಅನುಸಾರ ಪ್ರದೇಶವಾರು ಯೂನಿಟ್ ದರದ ಆಧಾರದ ಮೇಲೆ ಸ್ವಯಂ ಘೋಷಣಾ ಆಸ್ತಿ ತೆರಿಗೆ ಪದ್ಧತಿಯನ್ನು ದಿನಾಂಕ:01.04.2008 ರಿಂದ ಜಾರಿಗೆ ತರಲಾಗಿರುವುದು ಸರಿಯಷ್ಟೆ.

ಸದರಿ ಕಾಯ್ದೆ ಅನ್ವಯ ಪ್ರತಿ ಮೂರು ವರ್ಷಗಳಿಗೊಮ್ಮೆ ಕನಿಷ್ಠ ಶೇಕಡ 15 ರಷ್ಟು ಹಾಗೂ ಗರಿಷ್ಠ ಶೇಕಡ 30 ರಷ್ಟು ಆಸ್ತಿ ತೆರಿಗೆ ಪ್ರದೇಶವಾರು ಯೂನಿಟ್ ದರಗಳನ್ನು ಪರಿಷ್ಕರಣೆ ಮಾಡಲು ಅವಕಾಶವನ್ನು ಕಲ್ಪಿಸಲಾಗಿರುತ್ತದೆ. ಪ್ರಸ್ತುತ ಜಾರಿಯಲ್ಲಿರುವ ಮೊದಲನೇ ಆಸ್ತಿ ತೆರಿಗೆ ಬ್ಲಾಕ್ ಪದ್ಧತಿಯು ದಿನಾಂಕಃ 31.03.2011ಕ್ಕೆ ಮೂರು ವರ್ಷಗಳ ಅವಧಿಯು ಮುಕ್ತಾಯಗೊಳ್ಳುತ್ತಿರುವ ಹಿನ್ನಲೆಯಲ್ಲಿ ಪ್ರಸ್ತುತ ಜಾರಿಯಲ್ಲಿರುವ ದರಗಳ ಮೇಲೆ ವಸತಿ ಉಪಯೋಗದ ಸ್ವತ್ತುಗಳಿಗೆ ಶೇಕಡ 20 ರಂತೆ ಮತ್ತು ವಸತಿಯೇತರ ಸ್ವತ್ತುಗಳಿಗೆ ಶೇಕಡ 25 ರಂತೆ ದರಗಳನ್ನು ಪರಿಷ್ಕರಿಸುವಲ್ಲಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಟಿಪ್ಪಣಿಯನ್ನು ಮಂಡಿಸಲಾಗಿದ್ದು, ದಿನಾಂಕ:18.03.2011 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ವಿಷಯದ ಸಂಖ್ಯೆಃ 266/2010-11 ರಲ್ಲಿ ಈ ಕೆಳಕಂಡಂತೆ ನಿರ್ಣಯಿಸಿರುತ್ತಾರೆ.

> "ಕೆ.ಎಂ.ಸಿ ಕಾಯ್ದೆ 108 (ಎ) (16) ರ ಅನುಸಾರ ಪ್ರತಿ ಮೂರು ವರ್ಷಕ್ಕೊಮ್ಮೆ ಕನಿಷ್ಟ ಶೇಕಡ 15 ರಷ್ಟು ಹಾಗೂ ಗರಿಷ್ಟ ಶೇಕಡ 30 ರಷ್ಟು ಆಸ್ತಿ ತೆರಿಗೆ ಪರಿಷ್ಕರಣೆ ಮಾಡಲು ಪಾಲಿಕೆಗೆ ಅವಕಾಶ ಕಲ್ಪಿಸಲಾಗಿದೆ. ಕಾಯ್ದೆ ಪ್ರಕಾರ ಎಸ್.ಎ.ಎಸ್ ಪದ್ಧತಿಯನ್ನು 2008-2009 ನೇ ಸಾಲಿನಲ್ಲಿ ಜಾರಿಗೆ ತಂದಿದ್ದು, ಈ ಬ್ಲಾಕ್ ಅವಧಿಯು ದಿನಾಂಕ:01.04.2011 ರಿಂದ ಪ್ರಾರಂಭಗೊಳ್ಳಲಿರುವುದರಿಂದ ಕಾಯ್ದೆ ಪ್ರಕಾರ ವಸತಿ ಉಪಯೋಗದ ಆಸ್ತಿಗಳಿಗೆ ಶೇಕಡ 20 ರಷ್ಟನ್ನು ವಸತಿಯೇತರ ಕಟ್ಟಡಗಳಿಗೆ ಶೇಕಡ 25 ರಷ್ಟನ್ನು ದಿನಾಂಕಃ 01.04.2011ರಿಂದ ಪರಿಷ್ಕರಣೆ ಮಾಡಲು ಆಯುಕ್ತರು ದಿನಾಂಕ:11.03.2011ರಂದು ಟಿಪ್ಪಣಿ ಮಂಡಿಸಿರುತ್ತಾರೆ.
>
> ಸಾರ್ವಜನಿಕರು, ಕ್ಷೇಮಾಭಿವೃದ್ಧಿ ಸಂಘಗಳು ಹಾಗೂ ಜನಪ್ರತಿನಿಧಿಗಳು ಮುಂದುವರೆದ ಬ್ಲಾಕ್ ಅವಧಿಯಲ್ಲಿ ಆಸ್ತಿ ತೆರಿಗೆಯಲ್ಲಿ ಯಾವುದೇ ಪರಿಷ್ಕರಣೆ ಮಾಡಬಾರದೆಂದು ಒತ್ತಾಯಿಸಿರುತ್ತಾರೆ.
>
> ಈ ಬ್ಲಾಕ್ ಅವಧಿಯಲ್ಲಿ ಶೇಕಡ 3 ರಷ್ಟನ್ನು ಕಟ್ಟಡ ಸವಕಳಿಗಾಗಿ ನೀಡಬೇಕಾಗಿರುತ್ತದೆ. ಈ ಹಿನ್ನಲೆಯಲ್ಲಿ ದಿನಾಂಕ ಃ 01.04.2008 ರಿಂದ ಪ್ರಾರಂಭವಾದ ಈಗಿರುವ ಬ್ಲಾಕ್ ಅವಧಿಯನ್ನು 3 ವರ್ಷಗಳಿಂದ 5 ವರ್ಷಗಳಿಗೆ ಹೆಚ್ಚಿಸಿ, ಅಂದರೆ ಮುಂದಿನ ಎರಡು ವರ್ಷಗಳಿಗೆ (ದಿನಾಂಕ:01.04.2011 ರಿಂದ 30.03.2013ಕ್ಕೆ) ಹಾಲಿ ಇರುವ ದರವನ್ನೇ ವಸತಿ ಮತ್ತು ವಸತಿಯೇತರ ಕಟ್ಟಡಗಳಿಗೆ ಮುಂದುವರೆಸಲು ಹಾಗೂ ಯಾವುದೇ ಕಟ್ಟಡದ ವಯಸ್ಸಿನ ಸವಕಳಿಯನ್ನು ಈ ಮುಂದುವರೆದ ಅವಧಿಗೆ ವಿಸ್ತರಿಸದಿರಲು ಈ ಸಭೆಯು ಸರ್ವಾನುಮತದಿಂದ ತೀರ್ಮಾನಿಸಿ, ಕಾಯ್ದೆಗೆ ಸೂಕ್ತ ತಿದ್ದುಪಡಿ ತರಲು ಸರ್ಕಾರವನ್ನು ಕೋರುವ ಬಗ್ಗೆ ಸಭೆಯು ಸರ್ವಾನುಮತದಿಂದ ತೀರ್ಮಾನಿಸಲಾಯಿತು".

....................2

ನಗರ ಪಾಲಿಕೆಯ ನಿರ್ಣಯಕ್ಕೆ ಸೂಕ್ತ ತಿದ್ದುಪಡಿ ತರಲು ಸರ್ಕಾರದ ಅನುಮೋದನೆ ಪಡೆಯಲು ಪ್ರಸ್ತಾವನೆಯನ್ನು ಸಲ್ಲಿಸಲಾಗಿದ್ದು, ಈ ಸಂಬಂಧ ಸರ್ಕಾರವು ತನ್ನ ಪತ್ರದ ಸಂಖ್ಯೆ: ನಅಇ 216 ಎಂಎನ್‌ಯು 2011 ದಿನಾಂಕ: 10.11.2011 ರಲ್ಲಿ ಕೆಲವೊಂದು ಮಾಹಿತಿಗಳನ್ನು ಕೋರಲಾಗಿದ್ದು, ನಗರ ಪಾಲಿಕೆಯು ಸದರಿ ಕಾಯ್ದೆಗೆ ಸೂಕ್ತ ತಿದ್ದುಪಡಿ ತರಲು ದಿನಾಂಕ:25.01.2012 ರಂದು ಸರ್ಕಾರಕ್ಕೆ ಮಾಹಿತಿಗಳನ್ನು ಸಲ್ಲಿಸಲಾಗಿರುತ್ತದೆ.

ಮುಂದುವರೆದಂತೆ, 2008-2009ನೇ ಸಾಲಿನಲ್ಲಿ ಜಾರಿಗೆ ತರಲಾಗಿರುವ ಪ್ರದೇಶವಾರು ಯೂನಿಟ್ ಏರಿಯಾ ಆಸ್ತಿ ತೆರಿಗೆ ದರವು ಈ ಹಿಂದೆ ಬೆಂಗಳೂರು ಮಹಾನಗರ ಪಾಲಿಕೆಯು 2000 ನೇ ಸಾಲಿನಲ್ಲಿ ಸ್ವಯಂ ಘೋಷಣೆ ಆಸ್ತಿ ತೆರಿಗೆ ಪದ್ಧತಿ ಅಡಿಯಲ್ಲಿ ನಿಗಧಿಪಡಿಸಲಾಗಿರುವ ದರಗಳನ್ನೇ ಪ್ರಸ್ತುತ ನಿಗಧಿಪಡಿಸಲಾಗಿದ್ದು, ಅಂದಿನಿಂದ ಇಂದಿನವರೆಗೂ ದರಗಳು ಪರಿಷ್ಕರಣೆ ಆಗಿರುವುದಿಲ್ಲ. ಪ್ರಸ್ತುತ ಜಾರಿಯಲ್ಲಿರುವ ಸ್ವಯಂ ಘೋಷಣಾ ಆಸ್ತಿ ತೆರಿಗೆ ಪದ್ಧತಿಯು ದಿನಾಂಕ: 31.03.2011ಕ್ಕೆ ಮೂರು ವರ್ಷಗಳ ಅವಧಿಗೆ ಮುಕ್ತಾಯಗೊಂಡಿರುವ ಹಿನ್ನಲೆಯಲ್ಲಿ ಆಸ್ತಿ ತೆರಿಗೆ ದರಗಳ ಪರಿಷ್ಕರಣೆಯನ್ನು ದಿನಾಂಕ:01.04.2011 ರಿಂದಲೇ ಜಾರಿಗೆ ತರಬೇಕಾಗಿದ್ದು, ಕಾಯ್ದೆಯಂತೆ ಶೇಕಡ 15 ರಿಂದ 30 ರವರೆಗೆ ಆಸ್ತಿ ತೆರಿಗೆ ದರವನ್ನು ಪರಿಷ್ಕರಣೆ ಮಾಡಬೇಕಾಗಿರುವುದರಿಂದ ಮತ್ತು ದಿನಾಂಕ:01.04.2011 ರಿಂದ ಮತ್ತೇ ಕಟ್ಟಡ ಸವಕಳಿ ನೀಡಬೇಕಾಗಿರುವುದರಿಂದ ಪ್ರಸ್ತುತ ಜಾರಿಯಲ್ಲಿರುವ ದರಗಳನ್ನು ಪರಿಷ್ಕರಿಸಿ ದಿನಾಂಕ: 01.04.2011 ರಿಂದ ಜಾರಿಗೊಳಿಸುವ ಬಗ್ಗೆ ಸೂಕ್ತ ತೀರ್ಮಾನ ಕೈಗೊಳ್ಳಲು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಟಿಪ್ಪಣಿಯನ್ನು ಮಂಡಿಸಿದ್ದು, ದಿನಾಂಕ: 26.02.2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ವಿಷಯದ ಸಂಖ್ಯೆ:04(391)/2012-2013 ರಲ್ಲಿ ವಲಯ ವರ್ಗೀಕರಣವನ್ನು ಮಾತ್ರ ಜಾರಿಗೊಳಿಸಲು ಆಯುಕ್ತರು ಕ್ರಮ ಕೈಗೊಳ್ಳುವುದೆಂದು ತೀರ್ಮಾನಿಸಲಾಗಿದೆ. ಸದರಿ ಕಡತವು ಕೌನ್ಸಿಲ್ ಕಾರ್ಯಾಲಯದಿಂದ ಆಯುಕ್ತರಿಗೆ ಮೇ-2013ನೇ ಸಾಲಿನಲ್ಲಿ ಸ್ವೀಕೃತಿಗೊಂಡಿರುತ್ತದೆ. ಆದರೆ, 2013-14ನೇ ಸಾಲಿನ ಆರ್ಥಿಕ ವರ್ಷವು ದಿನಾಂಕ:01.04.2013ರಿಂದ ಪ್ರಾರಂಭಗೊಂಡು ಬಹುತೇಕ ತೆರಿಗೆದಾರರು ಆಸ್ತಿ ತೆರಿಗೆಯನ್ನು ಈ ಹಿಂದೆ ಪಾವತಿಸಲಾಗುತ್ತಿದ್ದ, ತೆರಿಗೆಯನ್ನೇ ಪಾವತಿಸಿದ್ದರಿಂದ ವಲಯ ವರ್ಗೀಕರಣವನ್ನು ಜಾರಿಗೊಳಿಸಲು ಸಾಧ್ಯವಾಗಿರುವುದಿಲ್ಲ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಈಗಾಗಲೇ ಎರಡನೇ ಬ್ಲಾಕ್ ಅವಧಿಯಲ್ಲಿಯೂ ಸಹ ಆಸ್ತಿ ತೆರಿಗೆ ದರಗಳ ಪರಿಷ್ಕರಣೆ ಕೈಗೊಳ್ಳದೆ ಇದ್ದು ನಗರ ಪಾಲಿಕೆ ಆರ್ಥಿಕ ಹಿತದೃಷ್ಟಿಯಿಂದ ಪ್ರಸ್ತುತ 2014-2015 ನೇ ಸಾಲಿನ ಆರ್ಥಿಕ ವರ್ಷ ಹಾಗೂ 3ನೇ ಬ್ಲಾಕ್ ಅವಧಿಯು ದಿನಾಂಕ:01.04.02014 ರಿಂದ ಪ್ರಾರಂಭಗೊಳ್ಳುತ್ತಿರುವುದರಿಂದ, ಕೆ.ಎಂ.ಸಿ ಕಾಯ್ದೆಯ ನಿಯಮಗಳಂತೆ ಕನಿಷ್ಟ ಶೇಕಡ 15 ರಷ್ಟು ಹಾಗೂ ಗರಿಷ್ಟ ಶೇಕಡ 30 ರವರೆಗೆ ಹೆಚ್ಚಳ ಮಾಡಲು ಅವಕಾಶವಿದ್ದು, ಪ್ರಸ್ತುತ ಜಾರಿಯಲ್ಲಿರುವ ದರಗಳ ಮೇಲೆ ಹೆಚ್ಚಳ ಮಾಡಬೇಕಾಗಿರುವುದರಿಂದ ಚಾಲ್ತಿಯಲ್ಲಿರುವ ಪ್ರದೇಶವಾರು ಯೂನಿಟ್ ದರಗಳ ಮೇಲೆ ಕನಿಷ್ಟ ಶೇಕಡ 15, ಗರಿಷ್ಟ 30 ರಷ್ಟು ಹೆಚ್ಚಿಸಿ ದಿನಾಂಕ:01.04.2014 ರಿಂದ ಜಾರಿಗೊಳಿಸುವ ಬಗ್ಗೆ ಸೂಕ್ತ ತೀರ್ಮಾನ ಕೈಗೊಳ್ಳಲು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಟಿಪ್ಪಣಿ ಮಂಡಿಸಿದ್ದು, ದಿನಾಂಕ:28.01.2014ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಿಷಯದ ಸಂಖ್ಯೆ:08(174)/2013-14ರಲ್ಲಿ ಪ್ರಸ್ತಾವನೆಯನ್ನು ಕೈಬಿಡಲಾಗಿದೆ ಎಂದು ತೀರ್ಮಾನಿಸಿರುತ್ತಾರೆ.

ಪ್ರಧಾನ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ ರವರ ಪತ್ರದ ಸಂಖ್ಯೆ:ನಅಇ 216 ಎಂಎನ್‌ಯು 2011 ದಿನಾಂಕ:21-5-2013 ರಲ್ಲಿ ಆಸ್ತಿ ತೆರಿಗೆ ದರಗಳ ಪರಿಷ್ಕರಣೆಯನ್ನು 3 ವರ್ಷಗಳ ಅವಧಿಯಿಂದ 5 ವರ್ಷಗಳ ಅವಧಿಗೆ ವಿಸ್ತರಿಸುವ ಪ್ರಸ್ತಾವನೆಯನ್ನು ಪರಿಶೀಲಿಸಿದ ನಂತರ ಪಾಲಿಕೆಯ ಪ್ರಸ್ತುತ ಆರ್ಥಿಕ ಸ್ಥಿತಿಯು ತೀರಾ ಕ್ಲಿಷ್ಟಕರವಾಗಿದ್ದು, ದೈನಂದಿನ ಕಾರ್ಯಗಳಿಗಾಗಿ ವಿವಿಧ ಹಣಕಾಸು ಸಂಸ್ಥೆಗಳಿಂದ ಸಾಲವನ್ನು ಪಡೆಯಲು ಪಾಲಿಕೆಯ ಸ್ಥಿರಾಸ್ತಿಯನ್ನು ಅಡಮಾನವಿಡುವಂತಹ ಪರಿಸ್ಥಿತಿ ಒದಗಿಸಿರುವ ಹಿನ್ನಲೆಯಲ್ಲಿ, ಪಾಲಿಕೆಯ ಆರ್ಥಿಕ ಹಿತದೃಷ್ಟಿಯಿಂದ ಪಾಲಿಕೆ ವ್ಯಾಪ್ತಿಯಲ್ಲಿ ಆಸ್ತಿ ತೆರಿಗೆ ದರಗಳ ಪರಿಷ್ಕರಣೆಯನ್ನು 3 ವರ್ಷಗಳ ಅವಧಿಯಿಂದ

5 ವರ್ಷಗಳ ಅವಧಿಗೆ ವಿಸ್ತರಿಸುವುದು ಸಮಂಜಸವಾಗಿರುವುದಿಲ್ಲವೆಂದು ತಿಳಿಸಿರುತ್ತಾರೆ ಹಾಗೂ ಮಹಾಲೇಖಪಾಲಕರು ಕರ್ನಾಟಕ (ಕೇಂದ್ರ ಸರ್ಕಾರ) ರವರು ಆಸ್ತಿ ತೆರಿಗೆ ದರಗಳ ಪರಿಷ್ಕರಣೆ ಮಾಡಲು ಕಾಯ್ದೆಯಲ್ಲಿ ಅವಕಾಶವಿದ್ದರೂ ಸಹ ನಗರ ಪಾಲಿಕೆಯು ಈ ಸಂಬಂಧ ಯಾವುದೇ ಕ್ರಮ ಕೈಗೊಂಡಿರುವುದಿಲ್ಲವೆಂದು ಆಡಿಟ್ ಆಕ್ಷೇಪಣೆಯಲ್ಲಿ ತಿಳಿಸಿರುತ್ತಾರೆ.

ಆದುದರಿಂದ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಕೆ.ಎಂ.ಸಿ. ಕಾಯ್ದೆಯ ನಿಯಮಗಳಂತೆ ಕನಿಷ್ಠ ಶೇಕಡ 15 ರಷ್ಟು ಹಾಗೂ ಗರಿಷ್ಠ ಶೇಕಡ 30ರವರೆಗೆ ಹೆಚ್ಚಳ ಮಾಡಲು ಅವಕಾಶವಿದ್ದು, ಪ್ರಸ್ತುತ ಜಾರಿಯಲ್ಲಿರುವ ದರಗಳ ಮೇಲೆ ಹೆಚ್ಚಳ ಮಾಡಬೇಕಾಗಿರುವುದರಿಂದ ಚಾಲ್ತಿಯಲ್ಲಿರುವ ಪ್ರದೇಶವಾರು ಯೂನಿಟ್ ದರಗಳ ಮೇಲೆ ಕನಿಷ್ಠ ಶೇಕಡ 15 ಗರಿಷ್ಠ 30ರಷ್ಟು ಹೆಚ್ಚಿಸಲು ಮತ್ತು ಕರ್ನಾಟಕ ಸರ್ಕಾರದ ಮುದ್ರಾಂಕ ಇಲಾಖೆಯು ದಿನಾಂಕ:08-10-2013 ರಂದು ಪ್ರಚುರಪಡಿಸಲಾಗಿರುವ ಸ್ಥಿರಾಸ್ತಿಗಳ ಮಾರ್ಗಸೂಚಿ ದರವನ್ನು ಅನುಸರಿಸಿ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ರಸ್ತೆಗಳ ವಲಯ ವರ್ಗೀಕರಣವನ್ನು ದಿನಾಂಕ: 01-04-2015 ರಿಂದ ಜಾರಿಗೊಳಿಸುವ ಬಗ್ಗೆ ಸೂಕ್ತ ತೀರ್ಮಾನ ಕೈಗೊಳ್ಳಲು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಟಿಪ್ಪಣಿಯನ್ನು ಮಂಡಿಸಲಾಗಿದ್ದು, ದಿನಾಂಕ:11-08-2014 ರಂದು ನಡೆದ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ವಿಷಯದ ಸಂಖ್ಯೆ:ತೆಆಸ್ಥಾಸ/22/2014-2015 ರಲ್ಲಿ ಪ್ರಸ್ತುತ ಜಾರಿಯಲ್ಲಿರುವ ದರಗಳನ್ವಯ ವಸತಿ ಸ್ವತ್ತುಗಳಿಗೆ ಶೇಕಡ 20 ಹಾಗೂ ವಸತಿಯೇತರ ಸ್ವತ್ತುಗಳಿಗೆ ಶೇಕಡ 25ರಷ್ಟು ಯೂನಿಟ್ ದರಗಳನ್ನು ಹೆಚ್ಚಿಸುವ ಮಾರ್ಪಾಟಿನೊಂದಿಗೆ ಆಯುಕ್ತರ ದಿನಾಂಕ:15-07-2014ರ ಟಿಪ್ಪಣಿಯನ್ನು ಒಪ್ಪುವುದೆಂದು ತೀರ್ಮಾನಿಸಲಾಗಿದೆ. ದಿನಾಂಕ: 28-01-2014 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಿಷಯದ ಸಂಖ್ಯೆ:05(174)/2014-15 ರಲ್ಲಿ ಪ್ರಸ್ತಾವನೆಯ ಬಗ್ಗೆ ಪುನರ್ ಪರಿಶೀಲಿಸಿ, ಸಭೆಯ ಮುಂದೆ ಮಂಡಿಸಲು ಕಡತವನ್ನು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಗೆ ಕಳುಹಿಸುವುದೆಂದು ಸಭೆಯು ತೀರ್ಮಾನಿಸಲಾಗಿದೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಕರ್ನಾಟಕ ಸರ್ಕಾರದ ಮುದ್ರಾಂಕ ಇಲಾಖೆಯು ದಿನಾಂಕ:27-10-2014 ರಂದು ಪ್ರಚುರಪಡಿಸಲಾಗಿರುವ ಸ್ಥಿರಾಸ್ತಿಗಳ ಮಾರ್ಗಸೂಚಿ ದರವನ್ನು ಅನುಸರಿಸಿ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ರಸ್ತೆಗಳ ವಲಯ ವರ್ಗೀಕರಣವನ್ನು ಜಾರಿಗೊಳಿಸುವ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:24-08-2015ರ ಟಿಪ್ಪಣಿ.

**<u>ತೀರ್ಮಾನ:</u> "ವಲಯ ವರ್ಗೀಕರಣವನ್ನು ಒಂದು ವಲಯ ಹೆಚ್ಚಳಕ್ಕೆ ಸೀಮಿತಗೊಳಿಸಿ 2016-17ನೇ ಸಾಲಿಗೆ ದಿನಾಂಕ: 01-04-2016 ರಿಂದ ಜಾರಿಗೊಳಿಸಲು ಅನುಮೋದಿಸಿದೆ".**

(ಟಿ.ಎಂ.ವಿಜಯಭಾಸ್ಕರ್)
ಆಡಳಿತಗಾರರು